MVC No.360/2019 PW-1

**<u>ದಿನಾಂಕ 06.04.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಎದುರುದಾರರಾದ ಆರ್ 2 ಪರ ಶ್ರೀ ಜೆ ಎಸ್ ವಕೀಲರಿಂದಃ</u>**

ನನ್ನ ಗಂಡ ದೂರನ್ನು ನೀಡಿರುತ್ತಾರೆ. ಅವರು ಅಪಘಾತವನ್ನು ಕಣ್ಣಾರೆ ನೋಡಿಲ್ಲ. ಮೃತ ದುಮ್ಮಮ್ಮ ರವರು ನನ್ನ ತಾಯಿಯ ಅಕ್ಕ. ಈ ಬಗ್ಗೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. 4 ನೇ ಅರ್ಜಿದಾರರಾದ ಸಿದ್ದಾರ್ಥ ನನ್ನ ಮಗ. ಮೃತ ದುಮ್ಮಮ್ಮ ರವರು ತನ್ನ ಪಡಿತರ ಚೀಟಿಯಲ್ಲಿ 4 ನೇ ಅರ್ಜಿದಾರರಾದ ಸಿದ್ದಾರ್ಥ ರವರನ್ನು ಸೇರಿಸಿಕೊಂಡಿದ್ದಾರೆ. ಮೃತ ದುಮ್ಮಮ್ಮ ರವರಿಗೆ ಮದುವೆಯಾಗಿರಲಿಲ್ಲ. ಮೃತ ದುಮ್ಮಮ್ಮ ರವರು 4ನೇ ಅರ್ಜಿದಾರರನ್ನು ದತ್ತು ಪಡೆದ ಬಗ್ಗೆ ದಾಖಲೆ ಇಲ್ಲ. ನನಗೆ ಮತ್ತು 4ನೇ ಅರ್ಜಿದಾರರು ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸುಳ್ಳು. ಮೃತ ದುಮ್ಮಮ್ಮ ರವರ ತಂದೆ ತಮ್ಮಯ್ಯರವರು ನನಗೆ ತಾತನಾಗಬೇಕು. ತಮ್ಮಯ್ಯ ರವರಿಗೆ 3 ಜನ ಹೆಣ್ಣು ಮಕ್ಕಳು ಮತ್ತು 1 ಮೃತ ಗಂಡು ಮಗು. ಮೃತ ಗಂಡು ಮಗುವಿಗೆ ಮಕ್ಕಳು ಇಲ್ಲ. 1 ಮತ್ತು 2ನೇ ಅರ್ಜಿದಾರರು ಮದುವೆಯಾಗಿ ಅವರ ಗಂಡನ ಮನೆಯಲ್ಲಿದ್ದಾರೆ. ಪ್ರತ್ಯಕ್ಷದರ್ಶಿಯವರು ಸಾಕ್ಷಿ ನುಡಿದಿದ್ದಾರೆ. ಮೃತ ದುಮ್ಮಮ್ಮ ರವರು ಹಿಂಬದಿಯಿಂದ ಕಾರು ಡಿಕ್ಕಿ ಪಡಿಸಿದ ನಂತರ ಬಿದ್ದರು ಎಂದರೆ ಗೊತ್ತಿಲ್ಲ. ಇಟಾಯಿಸ್ ಕಾರಿನಿಂದ ಮೃತ ದುಮ್ಮಮ್ಮರವರಿಗೆ ಅಪಘಾತ ಪಡಿಸಿಲ್ಲ ಎಂದರೆ ಸುಳ್ಳು. ಕ್ಲಸ್ಟರ್ ಕಾರ್ ಸಂಖ್ಯೆ ಕೆ ಎ 53 ಎಂ ಸಿ 7563 ರ ಕಾರಿನಿಂದ ಮೃತ ದುಮ್ಮಮ್ಮರವರಿಗೆ ಅಪಘಾತ ಪಡಿಸಿಲ್ಲ ಎಂದರೆ ಸುಳ್ಳು. ಈಮೇಲಿನ ವಿಷಯಗಳ ಬಗ್ಗೆ ಅಂತಿಮ ವರದಿಯನ್ನು ಸಲ್ಲಿದ್ದಾರೆಂದರೆ ಸಾಕ್ಷಿಯು ಎರಡೂ ಕಾರಿನಿಂದ ಅಪಘಾತವಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಅಪಘಾತದ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿಲ್ಲ ಎಂದರೆ ಸುಳ್ಳು. ಅಂತ್ಯ ಕ್ರಿಯೆಗೆ 3 ಲಕ್ಷ ರೂಪಾಯಿ ಹಣ ಖರ್ಚಾಗಿದೆ ಎಂದು ಹೇಳಿದ್ದು ಅದು ಸುಳ್ಳು ಎಂದರೆ ಸುಳ್ಳು. ಆ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸುಳ್ಳು. ನಿಪಿ-10 ಆಧಾರ್ ಕಾರ್ಡ್ ಸರಿಯಿದೆ. ಇದರ ಪ್ರಕಾರ ಅವರಿಗೆ 66 ವರ್ಷ ಎಂದರೆ ಸುಳ್ಳು. ವಯಸ್ಸಿ ನ ಬಗ್ಗೆ ಬೇರೆ ದಾಖಲೆ ನೀಡಿಲ್ಲ. ಮೃತ ದುಮ್ಮಮ್ಮರವರಿಗೆ ಅಪಘಾತವಾಗುವುದಕ್ಕಿಂತ ಮುಂಚೆ ಕೆಲಸ ಮಾಡಿ ತಿಂಗಳಿಗೆ 15 ಸಾವಿರ ಸಂಪಾದನೆ ಮಾಡುತ್ತಿದ್ದೆ ಎಂದು ಹೇಳಿದ್ದು ಆ ರೀತಿ ಹೇಳಿರುವುದು ಸುಳ್ಳು ಎಂದರೆ ಸುಳ್ಳು. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸುಳ್ಳು. ನನ್ನ ಗಂಡ ವ್ಯವಸಾಯ ಮಾಡುತ್ತಾರೆ. ಮೃತ ದುಮ್ಮಮ್ಮರವರಿಂದ ಯಾವುದೇ ಆರ್ಥಿಕ ಮತ್ತು ದೈಹಿಕ ನಷ್ಟ ಉಂಟಾಗಿಲ್ಲವೆಂದರೆ ಸುಳ್ಳು.

**<u>ಮರುವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

**(ವೆಂಕಟೇಶಪ್ಪ. ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**